ಅ) *ಬೆಂಗಳೂರು ಹೊರವಲಯದಲ್ಲಿರುವ ನಗರಸಭೆ ಮತ್ತು ಪುರಸಭೆಗಳಿಗೆ ಜಲ ಮಂಡಲಿಯವರಿಂದ ನೀರು ಸರಬರಾಜು ಮಾಡುವ ಯೋಜನೆಯ ಅಂದಾಜು ವೆಚ್ಚ ಎಷ್ಟು?*

ಆ) *ಈ ಯೋಜನೆಯ ಅಂದಾಜು ವೆಚ್ಚವನ್ನು ತಯಾರು ಮಾಡಲು ಯಾವ ಸಂಸ್ಥೆಗೆ ಗುತ್ತಿಗೆ ನೀಡಲಾಗಿದೆ?*

ಇ) *ಈ ಯೋಜನೆಯು ಎಂದು ಪ್ರಾರಂಭಗೊಳ್ಳಲಿದೆ ಮತ್ತು ಎಂದು ಪೂರ್ಣಗೊಳಲ್ಲಿದೆ?*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ರೂ. 262.67 ಕೋಟಿಗಳು.

ಆ) ಮೆ. ಕಿರ್ಲೋಸ್ಕರ್ ಕನ್ಸಲ್ಟೆಂಟ್ ಸಂಸ್ಥೆಗೆ ನೀಡಲಾಗಿದೆ.

ಇ) ಕಾರ್ಯ ಸಾಧ್ಯತಾ ವರದಿ ಬಂದ ನಂತರ ಹಾಗೂ ಆರ್ಥಿಕ ವ್ಯವಸ್ಥೆಯ ಬಗ್ಗೆ ನಿರ್ಧಾರವಾದ ನಂತರ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಕ್ರಮ ಕೈಗೊಳ್ಳಲಾಗುವುದು.

ವಿದ್ಯುತ್ ತಗುಲಿ ಮೃತಪಟ್ಟ ದಿನಗೂಲಿ ನೌಕರರಿಗೆ ಪರಿಹಾರ

5023 - ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರಿನ ಪೀಣ್ಯಾದ ಸಮೀಪದಲ್ಲಿ ಎಲೆಕ್ಟ್ರಿಕ್ ಟವರ್ ನಿರ್ಮಿಸುವ (ದಿನಾಂಕ 3.3.2000) ಸಂದರ್ಭದಲ್ಲಿ ಆದ ಅಪಘಾತದಲ್ಲಿ ಇಬ್ಬರು ದಿನಗೂಲಿ ನೌಕರರು ಮೃತಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಅಪಘಾತಕ್ಕೆ ಕಾರಣರಾದಂತಹ ವಿಡಿಯಾ ಲಿಮಿಟೆಡ್ ಕಾರ್ಖಾನೆಯವರ ಮೇಲೆ ಯಾವ ಕ್ರಮ ಕೈಗೊಂಡಿದ್ದೀರಿ?*

ಇ) *ಈ ಅಪಘಾತದಲ್ಲಿ ಮೃತಪಟ್ಟ ದಿನಗೂಲಿ ಕಾರ್ಮಿಕ ಕುಟುಂಬದವರಿಗೆ ನೀಡಿರುವ ಪರಿಹಾರ ಧನ ಎಷ್ಟು?*

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಬಂದಿದೆ.

ಆ) ವಿಡಿಯಾ ಲಿಮಿಟೆಡ್ ಕಾರ್ಖಾನೆಯವರು ತಮ್ಮ ಕಾರ್ಖಾನೆಗೆ ವಿದ್ಯುತ್ ಮಾರ್ಗವನ್ನು ತಾವೇ ಸ್ವಯಂ ನಿರ್ವಹಿಸುತ್ತಿರುವಾಗ ಎಲೆಕ್ಟ್ರಿಕ್ ಟವರ್‌ಗೆ ತಂತಿ ಅಳವಡಿಸುವ ಸಮಯದಲ್ಲಿ ಸಂಭವಿಸಿದ ಮೆಕ್ಯಾನಿಕಲ್ ಅಪಘಾತದ ಬಗ್ಗೆ ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರವರು ತನಿಖೆ ಪಡೆಸಿ ಸೂಕ್ತ ಕ್ರಮ ತೆಗೆದುಕೊಳ್ಳುವರು.

ಇ) ವಿಡಿಯಾ ಲಿಮಿಟೆಡ್‌ರವರು ತಮ್ಮ ಕಾರ್ಖಾನೆಗೆ ವಿದ್ಯುತ್ ಲೈನನ್ನು ತಾವೇ ಸ್ವಯಂ ನಿರ್ವಹಿಸುತ್ತಿರುವಾಗ ಈ ಅಪಘಾತ ಸಂಭವಿಸಿರುತ್ತದೆ. ಆದುದರಿಂದ ಅಪಘಾತದಲ್ಲಿ ಮೃತಪಟ್ಟವರಿಗೆ ವಿಡಿಯಾ ಲಿಮಿಟೆಡ್‌ರವರೇ ಪರಿಹಾರ ನೀಡಬೇಕಾಗಿರುವುದರಿಂದ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಪರಿಹಾರವನ್ನು ನೀಡುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ವಿದ್ಯುತ್ ಕೊರತೆ ಮತ್ತು ಉತ್ಪಾದನೆ

5024 - ಶ್ರೀ ಅಮರೇಗೌಡ ಬಯ್ಯಾಪುರ ಲಿಂಗನಗೌಡ (ಲಿಂಗಸಗೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ಜಲವಿದ್ಯುತ್ ಉತ್ಪಾದನೆ ಮಾಡಿದ ರಾಜ್ಯ ಕರ್ನಾಟಕವಾದರೂ ಇಂದು ವಿದ್ಯುತ್ ಕೊರತೆಯಿಂದ ಬಳಲುತ್ತಿರುವುದು ನಿಜವಲ್ಲವೇ? ಹಾಗಿದ್ದಲ್ಲಿ, ಕೊರತೆಯ ಪ್ರಮಾಣವೆಷ್ಟು? ಮತ್ತು ಕೊರತೆಯನ್ನು ನೀಗಿಸಲು ಯಾವ ಯಾವ ಯೋಜನೆಗಳಿಂದ ವಿದ್ಯುತ್ತನ್ನು ಪಡೆಯಲಾಗುತ್ತಿದೆಯೇ? ಇದಕ್ಕಾಗಿ ಎಷ್ಟು ಹಣ ವ್ಯಯ ಮಾಡಲಾಗುತ್ತಿದೆ?*

ಆ) *ರಾಜ್ಯದ ಯಾವ ಯಾವ ಸ್ಥಳಗಳಲ್ಲಿ ಸಣ್ಣ ಪ್ರಮಾಣದಲ್ಲಿ ಜಲ ವಿದ್ಯುತ್ ಉತ್ಪಾದನೆ ಮಾಡಲು ಸಮೀಕ್ಷೆ ಕಾರ್ಯ ಕೈಗೊಳ್ಳಲಾಗಿದೆ. ಈ ಸ್ಥಳಗಳಲ್ಲಿ ಯಾವ ಪ್ರಮಾಣದಲ್ಲಿ ವಿದ್ಯುತ ಉತ್ಪಾದೆ ಮಾಡಬಹುದು? ಪ್ರತಿಯೊಂದು ಅಂದಾಜು ಖರ್ಚು ಎಷ್ಟು? ಇವುಗಳಲ್ಲಿ ಕೆಲವು ಸ್ಥಳಗಳ ವಿದ್ಯುತ್ ಉತ್ಪಾದನಾ ಕಾರ್ಯಗಳನ್ನು ಖಾಸಗೀ ಸಂಸ್ಥೆಗಳಿಗೆ ವಹಿಸಿಕೊಡಲು ಸರ್ಕಾರ ಇಚ್ಚಿಸಿದೆಯೇ ಹಾಗಿದ್ದಲ್ಲಿ ಕೈಗೊಳ್ಳಲಾಗಿರುವ ಕ್ರಮಗಳೇನು?*

ಇ) *ಕೈಗಾರಿಕಾ ವಲಯ ಮತ್ತು ಕೃಷಿ ವಲಯಕ್ಕೆ ಬಳಕೆಯಾಗುತ್ತಿರುವ ಒಟ್ಟು ವಿದ್ಯುತ್ ಪ್ರಮಾಣವೆಷ್ಟು? ಈ ಎರಡು ವಲಯಗಳಿಂದ ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುವ ವಿದ್ಯುತ್ ಬಾಕಿ ಹಣದ ಮೊತ್ತವೆಷ್ಟು?*

ಶ್ರೀ ವೀರಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯವು ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿರುವುದು ನಿಜ. 2000-2001ರ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಅನಿರ್ಬಂಧಿತ ಬೇಡಿಕೆ ಸುಮಾರು 30,210 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ. ಪ್ರಸಕ್ತ ಸಾಲಿಗೆ ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ಹಾಗೂ ಇತರೆ ಮೂಲಗಳಿಂದ ಲಭ್ಯವಾಗುವ ಒಟ್ಟು ವಿದ್ಯುತ್ ಸುಮಾರು 28,300 ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದ್ದು, ಸುಮಾರು 1910 ದಶಲಕ್ಷ ಯೂನಿಟ್ಟುಗಳಷ್ಟು ವಿದ್ಯುತ್ತಿನ ಪ್ರಮಾಣದ ಕೊರತೆಯಾಗುವುದೆಂದು ಅಂದಾಜು ಮಾಡಲಾಗಿದೆ. ಈ ಕೊರತೆಯನ್ನು ನೀಗಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ವಿವರಗಳು ಕೆಳಕಂಡಂತಿವೆ.